**ಕಾರ್ಯದರ್ಶಿ/ಖಜಾಂಚಿಗಳ ಕಛೇರಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು–560 002.**

**ಸಂಖ್ಯೆ:** ಲೆ.ಶಾ/ಶಿ.ಕ.ನಿ/ಜಿಲ್ಲಾ ಪ್ರಶಸ್ತಿ/139/2023–24 ದಿನಾಂಕ: 03.07.2023.

**ಸುತ್ತೋಲೆ:**

**ವಿಷಯ:** 2023–24 ನೇ ಸಾಲಿನ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ವತಿಯಿಂದ 5ನೇ ಸೆಪ್ಟೆಂಬರ್ 2023 ರ ಶಿಕ್ಷಕರ ದಿನಾಚರಣೆಯಂದು ನೀಡಲಾಗುವ **'ಜಿಲ್ಲಾ ಅತ್ಯುತ್ತಮ ಶಿಕ್ಷಕ'** ಪ್ರಶಸ್ತಿ ಬಗ್ಗೆ.

ಉಲ್ಲೇಖ: ದಿ: 01.02.2018 ರಂದು ನಡೆದ ನಿಧಿಗಳ ರಾಜ್ಯ ಸಮಿತಿ ಸಭೆಯ ನಿರ್ಣಯದಂತೆ.

* * * * *

2023–2024 ನೇ ಸಾಲಿನ 5ನೇ ಸೆಪ್ಟೆಂಬರ್ 2023 ರ **"ಶಿಕ್ಷಕರ ದಿನಾಚರಣೆ"** ಅಂಗವಾಗಿ ಜಿಲ್ಲೆಯ **"ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ"**ಗಾಗಿ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರನ್ನು ಅಯ್ಕೆ ಮಾಡಲು ಸುತ್ತೋಲೆಯೊಂದಿಗೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಯ್ಕೆ ಸಮಿತಿಯ ಕರ್ತವ್ಯಗಳ ಮಾರ್ಗಸೂಚಿಯನ್ನು ಲಗತ್ತಿಸಿದೆ. ಪ್ರತಿ ಜಿಲ್ಲೆಗೆ ನಿಗದಿ ಪಡಿಸಿರುವ ಪ್ರಶಸ್ತಿಗಳ ಸಂಖ್ಯೆ (ವಲಯವಾರು ವಿಂಗಡಿಸಿರುವ) ಹಾಗೂ ಪ್ರತಿ ಜಿಲ್ಲಾ ಪ್ರಶಸ್ತಿಗೆ ತಲಾ ರೂ.5000/– ರಂತೆ ನಗದು ಪುರಸ್ಕಾರವನ್ನು ಹಾಗೂ ಸಾದಿಲ್ವಾರು ವೆಚ್ಚವನ್ನು 'ಅನುಬಂಧ–ಅ' ರಲ್ಲಿರುವಂತೆ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಬಿಡುಗಡೆ ಮಾಡಲಾಗುವುದು. ಬಿಡುಗಡೆ ಮಾಡಲಾಗುವ ಮೊತ್ತದಲ್ಲಿ ಸಾದಿಲ್ವಾರು ವೆಚ್ಚ **ರೂ.2000/–** ಗಳನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು ಆಯ್ಕೆ ಸಮಿತಿಯ ಖರ್ಚು–ವೆಚ್ಚಕ್ಕಾಗಿ ಉಪಯೋಗಿಸಿ ಕೊಳ್ಳಬಹುದಾಗಿದೆ.

ರಾಜ್ಯದ ಎಲ್ಲಾ ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಾಲ್ಲೂಕು ಮಟ್ಟದ "ಶಿಕ್ಷಕರ ದಿನಾಚರಣೆ" ಕಾರ್ಯಕ್ರಮ ಆಯೋಜನೆಗೆ ರೂ.20,000/– ಗಳನ್ನು ಮತ್ತು ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಜಿಲ್ಲಾ ಮಟ್ಟದ "ಶಿಕ್ಷಕರ ದಿನಾಚರಣೆ" ಕಾರ್ಯಕ್ರಮ ಆಯೋಜನೆಗೆ ರೂ: 30,000**/–ಗಳ** ಮೊತ್ತವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಅದರ ವಿವರಗಳನ್ನು "ಅನುಬಂಧ–ಆ" ರಲ್ಲಿ ನೀಡಲಾಗಿದೆ. ದಿನಾಂಕ: 05.09.2023 ರಂದು ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡು, ಕಾರ್ಯಕ್ರಮದ ಖರ್ಚುವೆಚ್ಚದ ವಿವರಗಳ ದೃಢೀಕೃತ ಪ್ರತಿಯೊಂದಿಗೆ ವೋಚರ್‌ಗಳ ಸಹಿತ ಉಪಯೋಗಿತ ಪ್ರಮಾಣ ಪತ್ರವನ್ನು ಕಾರ್ಯಕ್ರಮ ಆಯೋಜಿಸಿದ ಬಗ್ಗೆ ಭಾವ ಚಿತ್ರಗಳು, ಸಿ. ಡಿ. ಪ್ರತಿಗಳೊಂದಿಗೆ ದಿನಾಂಕ: 30.09.2023 ರ ಒಳಗಾಗಿ ನಿಧಿಗಳ ಕಛೇರಿಗೆ ಕಳುಹಿಸಿಕೊಡುವಂತೆ ಸೂಚಿಸಿದೆ.

**ವಾರ್ಷಿಕ ವೇಳಾಪಟ್ಟಿ**

- ಜಿಲ್ಲಾ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗೆ ತಾಲ್ಲೂಕು ಹಂತದ ಅತ್ಯುತ್ತಮ ಶಿಕ್ಷಕರನ್ನು ಗುರುತಿಸಿ ಅರ್ಹರಾದ ಶಿಕ್ಷಕರ ಪಟ್ಟಿಯನ್ನು ಪ್ರಸ್ತಾವನೆಯೊಂದಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರಿಗೆ ಕಳುಹಿಸಲು ಕೊನೆಯ ದಿನಾಂಕ 07.08.2023.
- ತಾಲ್ಲೂಕು ಹಂತದಿಂದ ಬಂದ ಪ್ರಸ್ತಾವನೆಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಪರಿಶೀಲಿಸಿ ಜಿಲ್ಲಾ ಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡುವುದು. ಆಯ್ಕೆಯಾದ ಪ್ರೌಢ ಶಾಲಾ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರ ಪಟ್ಟಿಯನ್ನು ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) ರವರು ನಿಧಿಗಳ ಕಛೇರಿಗೆ ಕಳುಹಿಸಲು ಕೊನೆಯ ದಿನಾಂಕ 02.09.2023.
- ಜಿಲ್ಲಾ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗೆ ಶಿಕ್ಷಕರ ಆಯ್ಕೆ ಕಾರ್ಯವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ದಿನಾಂಕ:05.09.2023 ರಂದು ಜಿಲ್ಲಾ ಹಂತದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ಪ್ರಶಸ್ತಿ ಪಡೆದಂತಹ ಶಿಕ್ಷಕರನ್ನು ಗೌರವಿಸಲು ತಿಳಿಸಿದೆ.
- ಆಯ್ಕೆ ಪ್ರಕ್ರಿಯೆಯು ಕಾಲಮಿತಿ ಪ್ರಕರಣವಾಗಿದ್ದು ವೇಳಾಪಟ್ಟಿಯಂತೆ ಮಾರ್ಗಸೂಚಿಯನ್ನು ಅನುಸರಿಸಿ ಅರ್ಹ ಮತ್ತು ಉತ್ತಮ ಶಿಕ್ಷಕರನ್ನು ಆಯ್ಕೆಮಾಡಿ, ಅವರಿಗೆ ಪ್ರಶಸ್ತಿಯನ್ನು ಜಿಲ್ಲಾ ಹಂತದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ನೀಡಲು ತಿಳಿಸಿದೆ.

**ಆಯುಕ್ತರು , ಶಾಲಾ ಶಿಕ್ಷಣ ಇಲಾಖೆ**
**ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು/ಖಜಾಂಚಿಗಳು**

**ಮೇಲ್ಕಂಡ ಸುತ್ತೋಲೆಯನ್ನು ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ**

1. ಅಪರ ಆಯುಕ್ತರು, ಶಾ.ಶಿ.ಇ. ಕಲಬುರ್ಗಿ ಮತ್ತು ಧಾರವಾಡ.
2. ವಿಭಾಗೀಯ ಸಹ ನಿರ್ದೇಶಕರು ಸಾ.ಶಿ.ಇ. ಬೆಂಗಳೂರು, ಮೈಸೂರು, ಬೆಳಗಾಂ, ಕಲಬುರ್ಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ/ಅಭಿವೃದ್ಧಿ)
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.

**"ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ" ಗೆ ಆಯ್ಕೆ ಮಾಡಲು ತಾಲ್ಲೂಕು/ಜಿಲ್ಲೆ ಆಯ್ಕೆ ಸಮಿತಿಗೆ ಮಾರ್ಗಸೂಚಿ:**

**ಮಾನ್ಯ ಆಯುಕ್ತರ ಕಛೇರಿಯಿಂದ ಹೊರಡಿಸಿರುವ ಸುತ್ತೋಲೆಯಂತೆ ಶಿಕ್ಷಕರನ್ನು ರಾಜ್ಯ ಪ್ರಶಸ್ತಿಗೆ ಆಯ್ಕೆ ಮಾಡುವಾಗ ಅನುಸರಿಸಿರುವ ಮಾನದಂಡಗಳನ್ನು ಜಿಲ್ಲಾ ಪ್ರಶಸ್ತಿಗಳ ಆಯ್ಕೆಗೂ ಅನುಸರಿಸುವುದು.**

ತಾಲ್ಲೂಕು ಮಟ್ಟದ ಆಯ್ಕೆ ಸಮಿತಿ ಶಿಫಾರಸ್ಸು ಮಾಡಿರುವ ಶಿಕ್ಷಕರ ಪ್ರಸ್ತಾವನೆಗಳನ್ನು ಜಿಲ್ಲಾ ಆಯ್ಕೆ ಸಮಿತಿ ಪರಿಶೀಲಿಸಿ, ಶಿಕ್ಷಕರ ಶೈಕ್ಷಣಿಕ ಹಾಗೂ ಇತರೆ ಸಾಧನೆಗಳನ್ನು ನಿಖರವಾಗಿ ಮೌಲ್ಯಮಾಪನ ಮಾಡಿ ಪ್ರಶಸ್ತಿಗೆ ಅರ್ಹರಾದಂತಹ ಶಿಕ್ಷಕರನ್ನು ಜಿಲ್ಲಾ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗೆ ಆಯ್ಕೆ ಮಾಡುವುದು, ಅನುಬಂಧ–ಅ ನಲ್ಲಿ ಆಯಾ ಜಿಲ್ಲೆಗಳಲ್ಲಿರುವ ತಾಲ್ಲೂಕು ಸಂಖ್ಯೆಗಳಿಗೆ ಅನುಗುಣವಾಗಿ ಹಂಚಿಕೆ ಮಾಡಿರುವಂತೆ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ಪ್ರಶಸ್ತಿಗಳ ಸಂಖ್ಯೆಗಳನ್ನು ಆಯ್ಕೆ ಮಾಡಲು ನಮೂದಿಸಿದೆ.

ತಾಲ್ಲೂಕು ಮಟ್ಟದ ಆಯ್ಕೆಸಮಿತಿ ಶಿಫಾರಸ್ಸು ಮಾಡಿರುವ ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿ ಮೌಲ್ಯಮಾಪನ ಮಾಡುವುದು.

- ಒಂದು ತಾಲ್ಲೂಕಿನಿಂದ ಕನಿಷ್ಠ ಆರು ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ನಾಲ್ಕು ಪ್ರೌಢ ಶಾಲಾ ಶಿಕ್ಷಕರನ್ನು ಜಿಲ್ಲಾ ಹಂತದ ಪ್ರಶಸ್ತಿಗೆ ಶಿಫಾರಸ್ಸು ಮಾಡಬೇಕು. ಇದರಲ್ಲಿ ಶೇಕಡ 50 ಮಹಿಳಾ ಶಿಕ್ಷಕರನ್ನು ಒಳಗೊಂಡಿರಬೇಕು.
- ಪ್ರಶಸ್ತಿಗೆ ಆಯ್ಕೆ ಮಾಡುವಾಗ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ತರಗತಿಗಳಲ್ಲಿ ಬೋಧನೆ ಮಾಡುವ ಹಾಗೂ ಶಾಲೆಗೆ ಪೂರಕವಾದ ಕಾರ್ಯಗಳಲ್ಲಿ ತೊಡಗಿಸಿಕೊಂಡ ಶಿಕ್ಷಕರನ್ನು ಮಾತ್ರ ಪರಿಗಣಿಸತಕ್ಕದ್ದು.
- ಪ್ರಶಸ್ತಿಗೆ ಅರ್ಹರಾದಂತಹ ಶಿಕ್ಷಕರ ಒಟ್ಟಾರೆ ಸೇವೆಯಲ್ಲಿ ತರಗತಿಗಳಲ್ಲಿ ಬೋಧಕರಾಗಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರಬೇಕು. ಅದರಲ್ಲಿ ಗ್ರಾಮೀಣ ಶಾಲೆಗಳಲ್ಲಿ ಕನಿಷ್ಠ 05 ವರ್ಷಗಳು ಸೇವೆ ಸಲ್ಲಿಸಿರಬೇಕು.
- ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ ಮಾಡುವಾಗ ಮಹಿಳಾ ಅಭ್ಯರ್ಥಿಗಳಿಗೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಸೇವೆ ಸಲ್ಲಿಸಿದ ಶಿಕ್ಷಕರಿಗೆ ಆದ್ಯತೆ ನೀಡುವುದು.
- ಹಿಂದಿನ ಸಾಲುಗಳಲ್ಲಿ ಪ್ರಶಸ್ತಿ ಪಡೆದ ಶಿಕ್ಷಕರನ್ನು ಮತ್ತೆ ಮರು ಆಯ್ಕೆ ಮಾಡಬಾರದು.
- ಆಯ್ಕೆ ಮಾಡಿರುವ ಶಿಕ್ಷಕರು ಸಮಾಜದ ಹಾಗೂ ಇಲಾಖೆಯ ಗೌರವಗಳಿಗೆ ಪಾತ್ರರಾಗಿರಬೇಕು.
- ಶಿಕ್ಷಕರ ಆಯ್ಕೆ ಸಂಪೂರ್ಣವಾಗಿ ಮೌಲ್ಯಾಧಾರಿತವಾಗಿರಬೇಕು.
- ಪ್ರಶಸ್ತಿಗೆ ಆಯ್ಕೆಯಾಗುವ ಶಿಕ್ಷಕರು ಸಚ್ಚಾರಿತ್ರ್ಯವನ್ನು ಹೊಂದಿರಬೇಕು. ಅವರ ಬಗ್ಗೆ ಯಾವುದೇ ದೂರು, ವಿಚಾರಣೆ, ನ್ಯಾಯಾಲಯದ ಪ್ರಕರಣಗಳು ಇರಬಾರದು.
- ತಾಲ್ಲೂಕು ಆಯ್ಕೆ ಸಮಿತಿಯವರು ಅರ್ಹರಾದಂತಹ ಶಿಕ್ಷಕರ ಕಾರ್ಯಕ್ಷೇತ್ರಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವುದು.
- ಅಂತಿಮವಾಗಿ ಜಿಲ್ಲಾ ಪ್ರಶಸ್ತಿಗೆ ಆಯ್ಕೆಯಾದಂತಹ ಶಿಕ್ಷಕರ ಕಾರ್ಯಕ್ಷೇತ್ರಕ್ಕೆ ಜಿಲ್ಲಾ ಅಯ್ಕೆ ಸಮಿತಿಯವರು ಭೇಟಿ ನೀಡಿ ತಾಲ್ಲೂಕು ಆಯ್ಕೆ ಸಮಿತಿಯವರು ಶಿಫಾರಸ್ಸು ಮಾಡಿರುವಂತಹ ಅಂಶಗಳನ್ನು ಪರಿಶೀಲಿಸಿದ ನಂತರ ಪ್ರಶಸ್ತಿಗೆ ಅರ್ಹರಾಗಿದ್ದರೆ ಮಾತ್ರ ಅಯ್ಕೆ ಮಾಡತಕ್ಕದ್ದು.

....................4

- ಪ್ರಶಸ್ತಿಗೆ ಆಯ್ಕೆಯಾದಂತಹ ಪ್ರತಿಯೊಬ್ಬ ಶಿಕ್ಷಕರ ಶೈಕ್ಷಣಿಕ ಚಟುವಟಿಕೆ ಹಾಗೂ ಇಲಾಖಾ ಪ್ರೋತ್ಸಾಹದಾಯಕ ಕಾರ್ಯಕ್ರಮಗಳಾದ ಮಕ್ಕಳನ್ನು ಶಾಲೆಗೆ ಕರೆತರುವುದು, ಸಮುದಾಯದತ್ತ ಶಾಲೆ, ವಿಶೇಷ ದಾಖಲಾತಿ ಆಂದೋಲನ, ಶಾಲೆಬಿಟ್ಟ ಮಕ್ಕಳನ್ನು ಶಾಲೆಗೆ ದಾಖಲು ಮಾಡುವುದು ಇತ್ಯಾದಿ ಕಾರ್ಯಕ್ರಮಗಳಲ್ಲಿ ಸಮರ್ಪಕ ನಿರ್ವಹಣೆ ಬಗ್ಗೆ ಪೂರ್ಣ ಮಾಹಿತಿಗಳೊಂದಿಗೆ ಪ್ರಸ್ತಾವನೆಯನ್ನು ತಾಲ್ಲೂಕು ಆಯ್ಕೆ ಸಮಿತಿ, ಜಿಲ್ಲಾ ಆಯ್ಕೆ ಸಮಿತಿಗೆ ಕಳುಹಿಸಿಕೊಡಬೇಕು.
- ಜಿಲ್ಲಾ ಪ್ರಶಸ್ತಿಗೆ ಶಿಫಾರಸ್ಸು ಮಾಡಿರುವ ಪಟ್ಟಿಯನ್ನು ಆಯ್ಕೆ ಸಮಿತಿಯ ಎಲ್ಲಾ ಸದಸ್ಯರು ತಮ್ಮ ಅಭಿಪ್ರಾಯಗಳೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸಬೇಕು.

**ತಾಲ್ಲೂಕು ಮಟ್ಟದ ಆಯ್ಕೆ ಸಮಿತಿ ಸದಸ್ಯರು (ಮಹಿಳಾ ಸದಸ್ಯರನ್ನು ಒಳಗೊಂಡಿರಬೇಕು):**

| | | |
|---|---|---|
| 1 | ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಶಿಕ್ಷಣ ತರಭೇತಿ ಸಂಸ್ಥೆಯ ಒಬ್ಬ ಹಿರಿಯ ಉಪನ್ಯಾಸಕರು | ಗೌರವಾಧ್ಯಕ್ಷರು |
| 3 | ಮೂವರು ಶಿಕ್ಷಣ ತಜ್ಞರು (ಪ್ರಾಥಮಿಕ ಶಿಕ್ಷಣ \ ಪ್ರೌಢ ಶಿಕ್ಷಣ ಹಾಗೂ ಶಿಕ್ಷಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ತಲಾ ಒಬ್ಬರು) | ಸದಸ್ಯರು |
| 4 | ಕ್ಷೇತ್ರ ಸಮನ್ವಯಾಧಿಕಾರಿಗಳು | ಸದಸ್ಯರು |
| 5 | ತಾಲ್ಲೂಕು ಮಟ್ಟದ ಪ್ರೌಢ ಶಾಲಾ ಮುಖೋಪಾಧ್ಯಾಯರು ಹಾಗೂ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರುಗಳ ಸಂಘದ ಅಧ್ಯಕ್ಷರು | ಸದಸ್ಯರು |
| 6 | ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷರು | ಸದ್ಯಸರು |
| 7 | ತಾಲ್ಲೂಕು ಮಟ್ಟದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು | ಸದಸ್ಯರು |
| 8 | ತಾಲ್ಲೂಕಿನ ಅನುಭವಿ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪ–ಪ್ರಾಂಶುಪಾಲರು | ಸದಸ್ಯರು |

**ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಸದಸ್ಯರು (ಮಹಿಳಾ ಸದಸ್ಯರನ್ನು ಒಳಗೊಂಡಿರಬೇಕು):**

| | | |
|---|---|---|
| 1 | ಜಿಲ್ಲಾ ಉಪನಿರ್ದೇಶಕರು (ಆಡಳಿತ) | ಅಧ್ಯಕ್ಷರು |
| 2 | ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಯ ಉಪನಿರ್ದೇಶಕರು (ಅಭಿವೃದ್ಧಿ) | ಗೌರವಾಧ್ಯಕ್ಷರು |
| 3 | ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ಪ್ರತಿನಿಧಿಗಳು (ಸರ್ಕಾರಿ ಅಥವಾ ಅನುದಾನಿತ ಮಹಾವಿಧ್ಯಾಲಯದಿಂದ ಒಬ್ಬರು) | ಸದಸ್ಯರು |
| 4 | ಇಬ್ಬರು ಶಿಕ್ಷಣ ತಜ್ಞರು (ಪ್ರಾಥಮಿಕ / ಪ್ರೌಢ ಶಿಕ್ಷಣಕ್ಕೆ ಪ್ರತ್ಯೇಕ ಪ್ರತಿನಿಧಿಗಳು) (ಒಬ್ಬರು ಸರ್ಕಾರಿ ಶಾಲಾ ಶಿಕ್ಷಕರು. ಇನ್ನೊಬ್ಬರು ಅನುದಾನಿತ ಶಾಲಾ ಶಿಕ್ಷಕರು) | ಸದಸ್ಯರು |
| 5 | ಜಿಲ್ಲಾ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರುಗಳ ಸಂಘದ ಅಧ್ಯಕ್ಷರು | ಸದಸ್ಯರು |
| 6 | ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷರು | ಸದ್ಯಸರು |
| 7 | ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು | ಸದಸ್ಯರು |
| 8 | ರಾಜ್ಯ ಅಥವಾ ರಾಷ್ಟ್ರ ಪ್ರಶಸ್ತಿ ಪಡೆದ ಒಬ್ಬ ಶಿಕ್ಷಕರು | ಸದಸ್ಯರು |

**ಷರಾ:–**

ಕ್ರಮ ಸಂಖ್ಯೆ 03,05,06,07 ರಲ್ಲಿ ಅನುದಾನಿತ ಶಾಲೆಗಳಿಂದ ಒಬ್ಬರನ್ನು ನೇಮಕಾತಿ ಮಾಡಿಕೊಳ್ಳದಿದ್ದಲ್ಲಿ ಜಿಲ್ಲೆಯ ನುರಿತ ಅನುಭವಿ ಅನುದಾನಿತ ಪ್ರೌಢ ಶಾಲಾ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಬಹುದಾಗಿದೆ.

20.10.2010

ಆಯುಕ್ತರು , ಶಾಲಾ ಶಿಕ್ಷಣ ಇಲಾಖೆ
ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು/ಖಜಾಂಚಿಗಳು

3/7/23

ಅನುಬಂಧ–ಅ

2023–2024 ನೇ ಸಾಲಿನ ಜಿಲ್ಲಾ ಮಟ್ಟದ ಶಿಕ್ಷಕ ಪ್ರಶಸ್ತಿಗಳಿಗೆ ಪ್ರತಿ ಜಿಲ್ಲೆಗೆ ನಿಗದಿಪಡಿಸಿರುವ ನಗದು ಪ್ರಶಸ್ತಿಗಳ ಹಾಗೂ ಸಾದಿಲ್ವಾರು ಹಣ ಬಿಡುಗಡೆ ಮಾಡಿದ ವಿವರ

| ಕ್ರ. ಸಂ. | ಜಿಲ್ಲೆಗಳ ಹೆಸರು | ತಾಲ್ಲೂಕುಗಳ ಸಂಖ್ಯೆ | ಕಿರಿಯ ಪ್ರಾಥಮಿಕ (ತಾಲ್ಲೂಕು ಸಂಖ್ಯೆಗೆ ಅನುಗುಣವಾಗಿ) | ಹಿರಿಯ ಪ್ರಾಥಮಿಕ (ತಾಲ್ಲೂಕು ಸಂಖ್ಯೆಗೆ ಅನುಗುಣವಾಗಿ) | ಪ್ರೌಢಶಾಲೆ (ಪ್ರತಿಜಿಲ್ಲೆಗೆ ನಿಗದಿ ಪಡಿಸಿರುವ ಸಂಖ್ಯೆ) | ಒಟ್ಟು ಪ್ರಶಸ್ತಿಗಳ ಸಂಖ್ಯೆಗಳು | ನಗದು ಪುರಸ್ಕಾರಗಳಿಗೆ ತಲಾ ರೂ.5000/– ನಂತೆ ಒಟ್ಟು ಮೊತ್ತ | ಆಯ್ಕೆ ಸಮಿತಿ ಸಭೆಯ ಸಾದಿಲ್ವಾರು ವೆಚ್ಚ ತಲಾ ರೂ. 2000/– | ಸಾದಿಲ್ವಾರು ಮತ್ತು ನಗದು ಪುರಸ್ಕಾರದ ಒಟ್ಟು ಮೊತ್ತ |
|---|---|---|---|---|---|---|---|---|---|
| 1 | ಬೆಂಗಳೂರು–ಉತ್ತರ | 4 | 4 | 4 | 4 | 12 | 60,000 | 2,000 | 62,000 |
| 2 | ಬೆಂಗಳೂರು–ದಕ್ಷಿಣ | 5 | 5 | 5 | 5 | 15 | 75,000 | 2,000 | 77,000 |
| 3 | ಬೆಂಗಳೂರು (ಗ್ರಾ) | 4 | 4 | 4 | 4 | 12 | 60,000 | 2,000 | 62,000 |
| 4 | ರಾಮನಗರ | 4 | 4 | 4 | 4 | 12 | 60,000 | 2,000 | 62,000 |
| 5 | ಚಿಕ್ಕಬಳ್ಳಾಪುರ | 6 | 6 | 6 | 6 | 18 | 90,000 | 2,000 | 92,000 |
| 6 | ಕೋಲಾರ | 6 | 6 | 6 | 6 | 18 | 90,000 | 2,000 | 92,000 |
| 7 | ತುಮಕೂರು | 6 | 6 | 6 | 6 | 18 | 90,000 | 2,000 | 92,000 |
| 8 | ಮಧುಗಿರಿ | 4 | 4 | 4 | 4 | 12 | 60,000 | 2,000 | 62,000 |
| 9 | ಚಿತ್ರದುರ್ಗ | 6 | 6 | 6 | 6 | 18 | 90,000 | 2,000 | 92,000 |
| 10 | ಶಿವಮೊಗ್ಗ | 7 | 7 | 7 | 7 | 21 | 1,05,000 | 2,000 | 1,07,000 |
| 11 | ಮೈಸೂರು | 9 | 9 | 9 | 9 | 27 | 1,35,000 | 2,000 | 1,37,000 |
| 12 | ಮಂಡ್ಯ | 8 | 8 | 8 | 8 | 24 | 1,20,000 | 2,000 | 1,22,000 |
| 13 | ಚಿಕ್ಕಮಗಳೂರು | 8 | 8 | 8 | 8 | 24 | 1,20,000 | 2,000 | 1,22,000 |
| 14 | ಹಾಸನ | 8 | 8 | 8 | 8 | 24 | 1,20,000 | 2,000 | 1,22,000 |
| 15 | ಕೊಡಗು | 3 | 3 | 3 | 3 | 9 | 45,000 | 2,000 | 47,000 |
| 16 | ದಕ್ಷಿಣ ಕನ್ನಡ | 7 | 7 | 7 | 7 | 21 | 1,05,000 | 2,000 | 1,07,000 |
| 17 | ಧಾರವಾಡ | 7 | 7 | 7 | 7 | 21 | 1,05,000 | 2,000 | 1,07,000 |
| 18 | ಬಿಜಾಪುರ | 7 | 7 | 7 | 7 | 21 | 1,05,000 | 2,000 | 1,07,000 |
| 19 | ಉತ್ತರ ಕನ್ನಡ | 5 | 5 | 5 | 5 | 15 | 75,000 | 2,000 | 77,000 |
| 20 | ಬೆಳಗಾಂ | 7 | 7 | 7 | 7 | 21 | 1,05,000 | 2,000 | 1,07,000 |
| 21 | ಚಿಕ್ಕೋಡಿ | 8 | 8 | 8 | 8 | 24 | 1,20,000 | 2,000 | 1,22,000 |
| 22 | ಬಳ್ಳಾರಿ | 4 | 4 | 4 | 4 | 12 | 60,000 | 2,000 | 62,000 |
| 23 | ವಿಜಯನಗರ | 5 | 5 | 5 | 5 | 15 | 75,000 | 2,000 | 77,000 |
| 24 | ರಾಯಚೂರು | 5 | 5 | 5 | 5 | 15 | 75,000 | 2,000 | 77,000 |
| 25 | ಯಾದಗಿರಿ | 4 | 4 | 4 | 4 | 12 | 60,000 | 2,000 | 62,000 |
| 26 | ಗುಲ್ಬರ್ಗ | 7 | 7 | 7 | 7 | 21 | 1,05,000 | 2,000 | 1,07,000 |
| 27 | ಬೀದರ್ | 5 | 5 | 5 | 5 | 15 | 75,000 | 2,000 | 77,000 |
| 28 | ಚಾಮರಾಜನಗರ | 5 | 5 | 5 | 5 | 15 | 75,000 | 2,000 | 77,000 |
| 29 | ಗದಗ | 6 | 6 | 6 | 6 | 18 | 90,000 | 2,000 | 92,000 |
| 30 | ಹಾವೇರಿ | 7 | 7 | 7 | 7 | 21 | 1,05,000 | 2,000 | 1,07,000 |
| 31 | ಬಾಗಲಕೋಟೆ | 6 | 6 | 6 | 6 | 18 | 90,000 | 2,000 | 92,000 |
| 32 | ದಾವಣಗೆರೆ | 6 | 6 | 6 | 6 | 18 | 90,000 | 2,000 | 92,000 |
| 33 | ಉಡುಪಿ | 5 | 5 | 5 | 5 | 15 | 75,000 | 2,000 | 77,000 |
| 34 | ಕೊಪ್ಪಳ | 4 | 4 | 4 | 4 | 12 | 60,000 | 2,000 | 62,000 |
| 35 | ಸಿರ್ಸಿ | 6 | 6 | 6 | 6 | 18 | 90,000 | 2,000 | 92,000 |
| | | 204 | 204 | 204 | 204 | 612 | 30,60,000 | 70,000 | 31,30,000 |

ಉಪನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು
ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು.

ಅನುಬಂಧ–ಆ

2023–24ನೇ ಸಾಲಿಗೆ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಶಿಕ್ಷಕರ ದಿನಾಚರಣೆ ಆಚರಿಸಲು ಪ್ರತಿ ಜಿಲ್ಲೆ ಹಾಗೂ ಬ್ಲಾಕ್/ತಾಲ್ಲೂಕಿಗೆ ನಿಗದಿಪಡಿಸಿರುವಂತೆ ಹಣ ಬಿಡುಗಡೆ ಮಾಡಿದ ವಿವರ.

| ಕ್ರ. ಸಂ. | ಜಿಲ್ಲೆಗಳ ಹೆಸರು | ಪ್ರತಿ ಜಿಲ್ಲೆಯ ಉಪನಿರ್ದೇಶಕರಿಗೆ ಅನುದಾನ ಬಿಡುಗಡೆ ಮೊತ್ತ ತಲಾ 30,000 ರಂತೆ | ಪ್ರತಿ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮೊತ್ತ ತಲಾ 20,000 ರಂತೆ | | ಉಪನಿರ್ದೇಶಕರಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಬಿಡುಗಡೆ ಮಾಡಿದ ಅನುದಾನದ ಒಟ್ಟು ಮೊತ್ತ |
|---|---|---|---|---|---|
| | | | ತಾಲ್ಲೂಕುಗಳ ಸಂಖ್ಯೆ | ಮೊತ್ತ | |
| 1 | ಬೆಂಗಳೂರು–ಉತ್ತರ | 30,000 | 4 | 80,000 | 1,10,000 |
| 2 | ಬೆಂಗಳೂರು–ದಕ್ಷಿಣ | 30,000 | 5 | 1,00,000 | 1,30,000 |
| 3 | ಬೆಂಗಳೂರು (ಗ್ರಾ) | 30,000 | 4 | 80,000 | 1,10,000 |
| 4 | ರಾಮನಗರ | 30,000 | 4 | 80,000 | 1,10,000 |
| 5 | ಚಿಕ್ಕಬಳ್ಳಾಪುರ | 30,000 | 6 | 1,20,000 | 1,50,000 |
| 6 | ಕೋಲಾರ | 30,000 | 6 | 1,20,000 | 1,50,000 |
| 7 | ತುಮಕೂರು | 30,000 | 6 | 1,20,000 | 1,50,000 |
| 8 | ಮಧುಗಿರಿ | 30,000 | 4 | 80,000 | 1,10,000 |
| 9 | ಚಿತ್ರದುರ್ಗ | 30,000 | 6 | 1,20,000 | 1,50,000 |
| 10 | ಶಿವಮೊಗ್ಗ | 30,000 | 7 | 1,40,000 | 1,70,000 |
| 11 | ಮೈಸೂರು | 30,000 | 9 | 1,80,000 | 2,10,000 |
| 12 | ಮಂಡ್ಯ | 30,000 | 8 | 1,60,000 | 1,90,000 |
| 13 | ಚಿಕ್ಕಮಗಳೂರು | 30,000 | 8 | 1,60,000 | 1,90,000 |
| 14 | ಹಾಸನ | 30,000 | 8 | 1,60,000 | 1,90,000 |
| 15 | ಕೊಡಗು | 30,000 | 3 | 60,000 | 90,000 |
| 16 | ದಕ್ಷಿಣ ಕನ್ನಡ | 30,000 | 7 | 1,40,000 | 1,70,000 |
| 17 | ಧಾರವಾಡ | 30,000 | 7 | 1,40,000 | 1,70,000 |
| 18 | ಬಿಜಾಪುರ | 30,000 | 7 | 1,40,000 | 1,70,000 |
| 19 | ಉತ್ತರ ಕನ್ನಡ | 30,000 | 5 | 1,00,000 | 1,30,000 |
| 20 | ಬೆಳಗಾಂ | 30,000 | 7 | 1,40,000 | 1,70,000 |
| 21 | ಚಿಕ್ಕೋಡಿ | 30,000 | 8 | 1,60,000 | 1,90,000 |
| 22 | ಬಳ್ಳಾರಿ | 30,000 | 4 | 80,000 | 1,10,000 |
| 23 | ವಿಜಯನಗರ | 30,000 | 5 | 1,00,000 | 1,30,000 |
| 24 | ರಾಯಚೂರು | 30,000 | 5 | 1,00,000 | 1,30,000 |
| 25 | ಯಾದಗಿರಿ | 30,000 | 4 | 80,000 | 1,10,000 |
| 26 | ಗುಲ್ಬರ್ಗ | 30,000 | 7 | 1,40,000 | 1,70,000 |
| 27 | ಬೀದರ್ | 30,000 | 5 | 1,00,000 | 1,30,000 |
| 28 | ಚಾಮರಾಜನಗರ | 30,000 | 5 | 1,00,000 | 1,30,000 |
| 29 | ಗದಗ | 30,000 | 6 | 1,20,000 | 1,50,000 |
| 30 | ಹಾವೇರಿ | 30,000 | 7 | 1,40,000 | 1,70,000 |
| 31 | ಬಾಗಲಕೋಟೆ | 30,000 | 6 | 1,20,000 | 1,50,000 |
| 32 | ದಾವಣಗೆರೆ | 30,000 | 6 | 1,20,000 | 1,50,000 |
| 33 | ಉಡುಪಿ | 30,000 | 5 | 1,00,000 | 1,30,000 |
| 34 | ಕೊಪ್ಪಳ | 30,000 | 4 | 80,000 | 1,10,000 |
| 35 | ಸಿರ್ಸಿ | 30,000 | 6 | 1,20,000 | 1,50,000 |
| | | **10,50,000** | **204** | **40,80,000** | **51,30,000** |

ಉಪನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು

ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು.

## 2023–24 ನೇ ಸಾಲಿನ ಆಯವ್ಯಯ ವಿವರ ಘೋಷ್ವಾರೆ

| ಕ್ರ. ಸಂ | ವಿವರ | ಒಟ್ಟು ಪ್ರಶಸ್ತಿಗಳು | ಪ್ರತಿ ಪ್ರಶಸ್ತಿ ಮೊತ್ತ ಅನುದಾನ | ಒಟ್ಟು ರೂ ಬಿಡುಗಡೆ ಮಡಬೇಕಿರುವ ಅನುದಾನ |
|---|---|---|---|---|
| 1 | ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಜಿಲ್ಲಾ ಪ್ರಶಸ್ತಿ ಪ್ರತಿ ವಲಯ/ ತಾಲ್ಲೂಕಿಗೆ ಒಂದರಂತೆ | 204 | 5000/– | 10,20,000=00 |
| 2 | ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಜಿಲ್ಲಾ ಪ್ರಶಸ್ತಿ ಪ್ರತಿ ವಲಯ/ ತಾಲ್ಲೂಕಿಗೆ ಒಂದರಂತೆ | 204 | 5000/– | 10,20,000=00 |
| 3 | ಪ್ರೌಢಶಾಲಾ ಶಿಕ್ಷಕರಿಗೆ ಜಿಲ್ಲಾ ಪ್ರಶಸ್ತಿಗೆ | 204 | 5000/– | 10,20,000=00 |
| 4 | ಪ್ರತಿ ಜಿಲ್ಲೆಗೆ ಆಯ್ಕೆ ಸಮಿತಿಗೆ ಸಾದಿಲ್ವಾರು ವೆಚ್ಚ ಜಿಲ್ಲಾ ಉಪನಿರ್ದೇಶಕರಿಗೆ | 35 | 2000/– | 70,000=00 |
| 5 | ತಾಲ್ಲೂಕು/ ವಲಯ ಹಂತದ ಶಿಕ್ಷಕರ ದಿನಾಚರಣೆ ಆಚರಣೆಗಾಗಿ ಅನುದಾನ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಆಯೋಜನಾ ವೆಚ್ಚ) | 204 | 20,000/– | 40,80,000=00 |
| 6 | ಜಿಲ್ಲಾ ಹಂತದ ಶಿಕ್ಷಕರ ದಿನಾಚರಣೆ ಆಚರಣೆಗಾಗಿ ಅನುದಾನ–ಉಪನಿರ್ದೇಶಕರು(ಆಡಳಿತ),ಇವರಿಗೆ (ಆಯೋಜನಾ ವೆಚ್ಚ) | 35 | 30,000/– | 10,50,000=00 |
| | | | **ಒಟ್ಟು** | **82,60,000=00** |

ಉಪನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು
ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು.